ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,
ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ : ಸಿ5(1)ವರ್ಗ-01/2013-14 ದಿನಾಂಕ : 26-06-2013

## ಜ್ಞಾಪನ

ವಿಷಯ :- ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ವರ್ಗದ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳ 2013 ರ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ ಹಾಗೂ ತಿರಸ್ಕೃತ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ :- ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ/22/ಸೇನೌವ 2013 ದಿನಾಂಕ : 07-06-2013.

2 :- ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ : 14-06-2013.

3:- ಈ ಕಛೇರಿಯ ಸಮ ಸಂಖ್ಯೆ ಜ್ಞಾಪನ ದಿನಾಂಕ : 22-06-2013.

* * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ವರ್ಗದ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು2013-14 ನೇ ಸಾಲಿನಲ್ಲಿ ವರ್ಗಾವಣೆಯನ್ನು ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಉಲ್ಲೇಖಿತ (1) ರ ಸರ್ಕಾರದ ಆದೇಶ ಹಾಗೂ (2) ರ ಈ ಕಛೇರಿಯ ಸುತ್ತೋಲೆಯನ್ವಯ ಪರಿಶೀಲಿಸಲಾಗಿದೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಮಾಡಬಹುದಾಗಿರುವ ಕಛೇರಿ / ವೃಂದಗಳ ವರ್ಗಾವಣೆಗೆ ಅರ್ಹರಿರುವ ಅಧಿಕಾರಿ ಹಾಗೂ ಸಿಬ್ಬಂಧಿಗಳ ತಾತ್ಕಾಲಿಕ ಆದ್ಯತಾ ಪಟ್ಟಿಯನ್ನು ಹಾಗೂ ವರ್ಗಾವಣೆಗೆ ಅರ್ಹರಿಲ್ಲದೇ ಇರುವ ಅಧಿಕಾರಿ ಹಾಗೂ ಸಿಬ್ಬಂಧಿಗಳ ತಿರಸ್ಕೃತ ಪಟ್ಟಿಯನ್ನು ಇಲಾಖೆಯ ವೆಬ್ ಸೈಟ್ ವಿಳಾಸ : www.schooleducation.kar.nic.in ರಲ್ಲಿ ದಿನಾಂಕ : 22-06-2013 ರಂದು ಉಲ್ಲೇಖಿತ (3) ರ ಜ್ಞಾಪನಾದೇಶದಲ್ಲಿ ಪ್ರಕಟಿಸಿ, ಸದರಿ ಪಟ್ಟಿಗಳಿಂದ ಭಾದಿತರಾಗಬಹುದಾಂತಹ ಅಧಿಕಾರಿ / ಸಿಬ್ಬಂದಿಗಳು ದಿನಾಂಕ : 24-06-2013 ರಂದು 4-00 ಗಂಟೆಯೊಳಗಾಗಿ ಈ ಕಛೇರಿಗೆ ಮುದ್ದಾಂ ಸಲ್ಲಿಸುವಂತೆ ತಿಳಿಸಲಾಗಿತ್ತು.

ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ವಗಾವಣೆಗೆ ಅರ್ಹರಿರುವರ ಆದ್ಯತಾ ಪಟ್ಟಿಯನ್ನು ಹಾಗೂ ವರ್ಗಾವಣೆಗೆ ಅರ್ಹರಿಲ್ಲದಿರುವವರ ತಿರಸ್ಕೃತ ಪಟ್ಟಿಯನ್ನು ವೆಬ್ ಸೈಟ್ ವಿಳಾಸ : www.schooleducation.kar.nic.in ರಲ್ಲಿ ಪ್ರಕಟಿಸಲಾಗಿದೆ.

**<u>ನಮೂನ - 1 :-</u>** ಕೋರಿಕೆಯ ವರ್ಗಾವಣೆಗೆ ಅರ್ಹರಿರುವ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳ ಹುದ್ದೆವಾರು ಆದ್ಯತಾ ಪಟ್ಟಿ.

**<u>ನಮೂನೆ -2 :-</u>** ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವವರ ಹುದ್ದೆವಾರು ಆಧ್ಯತಾ ಪಟ್ಟಿ.

**<u>ನಮೂನೆ - 3 :-</u>** ಕೋರಿಕೆಯ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವವರ ಪೈಕಿ ವಿವಿಧ ಕಾರಣಗಳ ಹಿನ್ನೆಲೆಯಲ್ಲಿ ವರ್ಗಾವಣೆಗೆ ಅರ್ಹರಿಲ್ಲದೇ ಇರುವವರ, ಹುದ್ದೆವಾರು ತಿರಸ್ಕೃತ ಪಟ್ಟಿ.

ಕೌನ್ಸಿಲಿಂಗ್ ವಿವರ :-

| | |
|---|---|
| ಕೌನ್ಸಿಲಿಂಗ್ ದಿನಾಂಕ : | 29-06-2013 |
| ವರ್ಗಾವಣೆ ಕೌನ್ಸಿಲಿಂಗ್ ನಡೆಯುವ ಸ್ಥಳ | ಶಿಕ್ಷಕರ ಕಲ್ಯಾಣ ನಿಧಿ ಕಛೇರಿ, ಶಿಕ್ಷಕರ ಸಧನ, ಕಾವೇರಿ ಭವನ ಎದುರು, ಕೆ.ಜಿ. ರಸ್ತೆ, ಬೆಂಗಳೂರು |
| ಕೌನ್ಸಿಲಿಂಗ್ ಸಮಯ | ಬೆಳಿಗ್ಗೆ : 9-00 ಗಂಟೆಗೆ - ಕೋರಿಕೆ ವರ್ಗಾವಣೆ |
| | ಮಧ್ಯಾಹ್ನ : 2-30 ಗಂಟೆಗೆ - ಪರಸ್ಪರ ವರ್ಗಾವಣೆ |
| | ಮಧ್ಯಾಹ್ನ : 3-00 ಗಂಟೆಗೆ ಅಂತರ ಆಯುಕ್ತಾಲಯ ವರ್ಗಾವಣೆ |

ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಗೆ ಅರ್ಹರಿರುವ ಅಧಿಕಾರಿ / ನೌಕರರುಗಳು ದಿನಾಂಕ : 29-06-2013 ರಂದು ಖುದ್ದಾಗಿ ಮೇಲ್ಕಂಡ ಸಮಯದಲ್ಲಿ ಹಾಜರಿರುವಂತೆ ತಿಳಿಸಿದೆ.

(ಕೆ.ಪಿ.ಹನುಮಂತರಾಯಪ್ಪ)
ಅಪರ ಆಯುಕ್ತರು(ಆಡಳಿತ)(ಹೆ.ಪ್ರ).

ಗೆ,

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲಬರ್ಗಾ
2) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲ ನಿರ್ದೇಶಕರುಗಳಿಗೆ.
3) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲ ಜಂಟಿ ನಿರ್ದೇಶಕರುಗಳಿಗೆ,
4) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲ ಉಪ ನಿರ್ದೇಶಕರು (ಆಡಳತ) ಹಾಗೂ (ಅಭಿವೃದ್ಧಿ).
5) ಕಛೇರಿ ಪ್ರತಿ.